**ಎಮ್.ವಿ.ಸಿ. ನಂಃ 106/2023**

**ಪಿ.ಡಬ್ಲ್ಯೂಃ1, ಬಸವರಾಜ**

ದಿನಾಂಕ : 21-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಎ. ಕೆ. ಕೆ. ವಕೀಲರಿಂದ :

2 ನೇ ಅರ್ಜಿದಾರಳು ನನ್ನ ಹೆಂಡತಿ ಆಗಬೇಕು. ಮೃತ ಪ್ರಕಾಶ ರೆಡ್ಡಿ ನನಗೆ ಮಗ ಆಗಬೇಕು. ನನ್ನ ಮಗನಿಗೆ ಅಪಘಾತ ಸಮಯದಲ್ಲಿ 26 ವರ್ಷ ಇತ್ತು ಎಂದು ತೋರಿಸಲು ಆಧಾರ ಕಾರ್ಡ ದಾಖಲೆ ಹಾಕಿರುತ್ತೇನೆ. ಅವರಿಗೆ 26 ವರ್ಷ ವಯಸ್ಸು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವರಿಗೆ 30 ಕ್ಕಿಂತ ಹೆಚ್ಚು ವಯಸ್ಸು ಆಗಿತ್ತು ಎಂದು ಸೂಚಿಸುವುದು ಸರಿಯಲ್ಲ. ಮೃತ ಪ್ರಕಾಶ ರೆಡ್ಡಿ ಇವರಿಗೆ ಮದುವೆ ಆಗಿರಲಿಲ್ಲಾ. ಕೆ. ಎ.: 38 ಡಬ್ಲೂ -3374 ಮೋಟಾರ ಸೈಕಲ ನನ್ನ ಮಗ ಪ್ರಕಾಶ ಹೆಸರಲ್ಲಿ ಇತ್ತು. ಸದರಿ ವಾಹನ ಅವರಿಗೆ ಸೇರಿದ್ದು ಎಂದು ತೋರಿಸಲು ಆರ್ ಸಿ ದಾಖಲೆ ಹಾಕಿಲ್ಲಾ. ಸದರಿ ವಾಹನ ನನ್ನ ಮಗನ ಹೆಸರಿನಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಗ 4-5 ವರ್ಷದಿಂದ ಮೋಟಾರ ಸೈಕಲ ಓಡಿಸುತ್ತಿದ್ದ, ವಾಹನ ಓಡಿಲು ಲೈಸನ್ಸ ಹೊಂದಿದ್ದ, ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೆನೆಂದು ಸಾಕ್ಷಿ ಹೇಳುತ್ತಾರೆ. ಅದನ್ನು ನಾನು ಸಾಕ್ಷಿಯಲ್ಲಿ ಹಾಜರು ಪಡಿಸಿಲ್ಲಾ ಎಂದರೆ ಸರಿಯಲ್ಲ. ನನ್ನ ಮಗ ಲೈಸನ್ಸ ಇಲ್ಲದೇ ವಾಹನ ಓಡಿಸುತ್ತಿದ್ದ ಎಂದು ಸೂಚಿಸುವುದು ಸರಿಯಲ್ಲ.

ಅಪಘಾತದ ದಿನ ನನ್ನ ಮಗ ಓಡಿಸುತ್ತಿದ್ದ ವಾಹನಕ್ಕೆ ವಿಮೆ ಚಾಲ್ತಿಯಲ್ಲಿ ಇತ್ತು, ಅದು ಯಾವ ಇನ್ಸುರೆನ್ಸ್ ಕಂಪನಿ ಎಂದು ನನಗೆ ಗೊತ್ತಿಲ್ಲಾ. ಸದರಿ ಪಾಲಿಸಿ ಕಾಫಿಯನ್ನು ನಾನು ಹಾಜರು ಪಡಿಸಿಲ್ಲಾ. ಅದರ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದು ಹೇಳುತ್ತಾರೆ. ಆ ದಿನ ನನ್ನ ಮಗ ಮತ್ತು ಸಚಿನ ರೆಡ್ಡಿ ಇವರು ವಾಹನದಲ್ಲಿ ಬಲಭೀಮಶ್ವರ ದೇವಸ್ಥಾನ ಹತ್ತಿರ ಬಿಗುಡಿ - ಗೋಗಿ ರಸ್ತೆಯಲ್ಲಿ ಬರುತ್ತಿದ್ದಾಗ ಕೆಎ -32-ಇಎ-9741 ವಾಹನದ ಸವಾರ ಶಹಾಪೂರ ಕಡೆಯಿಂದ ಅತಿವೇಗ ಮತ್ತು ಅಜಾರೂಕತೆಯಿಂದ ಬಂದು ಯಾವುದೇ ಸೂಚನೆ ನೀಡದೇ ನನ್ನ ಮಗನ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮಗ ಪ್ರಜ್ಞೆ ತಪ್ಪಿದ್ದು ಅವರನ್ನು ಶಹಾಪೂರಿನ ಸ್ಪಂದನಾ ಆಸ್ಪತ್ರೆಗೆ ಚಿಕಿತ್ಸಗೆ ಸೇರಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಲ್ಲಿ 1 ದಿನ ಚಿಕಿತ್ಸೆ ಪಡೆದಿದ್ದ, ನಂತರ ಚಿರಾಯು ಆಸ್ಪತ್ರೆ ಕಲಬುರಿಗಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಸೇರಿಸಲಾಗಿದ್ದು, ದಿ: 29-08-2022 ರಂದು ಅವರು ಅಪಘಾತದಲ್ಲಿ ಆದ ಗಾಯದಿಂದ ಮೃತ ಪಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಎಮ್.ವಿ.ಸಿ. ನಂಃ **106/2023**
ಪಿ.ಡಬ್ಲ್ಯೂಃ**1,** ಬಸವರಾಜ

ಆ ದಿನ ನನ್ನ ಮಗ ತನ್ನ ವಾಹನವನ್ನು ಅತಿವೇಗ ಮತ್ತು ಅಜಾರೂಕತೆಯಿಂದ ಓಡಿಸಿ ಎದುರಿಗೆ ಬರುತ್ತಿದ್ದ ಕೆಎ 32-ಇಎ-9741 ವಾಹನಕ್ಕೆ ಅಪಘಾತ ಪಡಿಸಿದ್ದು ನನ್ನ ಮಗನ ತಪ್ಪಿನಿಂದಲೇ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಎದುರುದಾರರ ವಾಹನ ಸವಾರನ ತಪ್ಪು ಇಲ್ಲಾ ಎಂದು ಹೇಳುವುದು ಸರಿಯಲ್ಲ. ನನ್ನ ಮಗ ಬಿಲ್ಡ ಕೇರ್ ಎಂಟರಪ್ರೈಸ್ ನಲ್ಲಿ ಸುಪರವೈಜರ ಆಗಿ ಕೆಲಸ ಮಾಡಿ ತಿಂಗಳಿಗೆ ರೂ. 20,000/- ಸಂಬಳ ಪಡೆಯುತ್ತಿದ್ದ ಬಗ್ಗೆ ಹಾಗೂ ವ್ಯವಸಾಯದಿಂದ ವಾರ್ಷಿಕ ರೂ. 3,00,000/- ಆಧಾಯ ಪಡೆಯುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಕಿಲ್ಲ ಅಂದರೆ ಸರಿ. ನನ್ನ ಮಗನ ಆದಾಯದಿಂದಲೇ ಕುಟುಂಬ ನಡೆಯುತ್ತಿತ್ತು ಮತ್ತು ನಾವು ಅವನ ಆದಾಯದ ಮೇಲೆ ಅವಲಂಬಿತರಾಗಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತವು ದಿ: 20-08-2022 ರಂದು ಆಗಿದ್ದು ಅದೆ ದಿನ ಆಸ್ಪತ್ರೆಗೆ ಸೇರಿಸಿದ್ದು ಅಲ್ಲಿ ಎಮ್ ಎಲ್ ಸಿ ಮಾಡದೇ ಮತ್ತೇ 4 ದಿನ ತಡವಾಗಿ ಏಕೆ ದೂರು ಕೊಟ್ಟಿದಿರಿ ಎಂದು ಕೇಳಿದಕ್ಕೆ ಸಾಕ್ಷಿ ಆಸ್ಪತ್ತೆಗೆ ಸೇರಿಸುವುದರಲ್ಲಿ ಓಡಾಡುವುದರಲ್ಲಿ ತಡವಾಯಿತು ಆದ ಕಾರಣ ದೂರನ್ನು ತಡವಾಗಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಪರಿಹಾರ ಪಡೆಯಲು ಇದು ಅಪಘಾತದಲ್ಲಿ ಆದ ಸಾವು ಅಲ್ಲದೇ ಇದ್ದರೂ 4 ದಿನ ತಡವಾಗಿ ಆಲೋಚಿಸಿ ಸುಳ್ಳು ದೂರು ಕೊಟ್ಟಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

ನನ್ನ ಮಗನ ವಾಹನದ ವಿಮೆ ಕಂಪನಿಯನ್ನು ಈ ಪ್ರಕರಣದಲ್ಲಿ ಪಾರ್ಟಿಯಾಗಿ ಮಾಡಿಲ್ಲಾ ಎನ್ನುವುದು ಸರಿ. ಪೋಲಿಸರ ಜೊತೆ ಶಾಮೀಲಾಗಿ ಪರಿಹಾರವನ್ನು ಪಡೆಯಲು ಎದುರುದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೆವೆ ಎಂದರೆ ಸರಿಯಲ್ಲ. ನನ್ನ ಮಗನ ಸಾವಿನಿಂದ ನಾವು ನಿರಾಶ್ರಿತರಾಗಿದ್ದು ಅವನ ಆಧಾಯದ ಮೇಲೆ ಅವಲಂಬಿತರಾಗಿದ್ದೇವು ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸರಿಯಲ್ಲ. ಪರಿಹಾರ ಸಿಗಲಿ ಎಂದು ಸುಳ್ಳು ದಾಖಲೆಗಳನ್ನು ಹಾಕಿ ಸುಳ್ಳು ಪ್ರಕರಣ ದಾಖಲಿಸಿದ್ದೆನೆ ಅಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರದ ಮೊತ್ತವು ಆಧಾರ ರಹಿತವಾಗಿದ್ದು, ಎದುರುದಾರರು ಪರಿಹಾರ ನೀಡಲು ಭ್ಯಾದ್ಯಸ್ಥರು ಅಲ್ಲಾ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆ: ಇಲ್ಲಾ</u>

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.